# ಹಿಂದೂ ಧರ್ಮ ಮತ್ತು ರಾಜಕೀಯ

ಎಲ್ಲಾ ಧರ್ಮದವರು ತಮ್ಮ ಧರ್ಮದ ಅನುಯಾಯಿಗಳ ಸಂಖ್ಯೆ ದೇಶದಲ್ಲಿ ಹೆಚ್ಚಾಗಬೇಕೆಂದು ಇಚ್ಛೆ ಪಡುತ್ತಾರೆ. ಹಿಂದೂ ಧರ್ಮದ ಅನುಯಾಯಿಗಳು ಆಗಲೇ ಬಹುಸಂಖ್ಯಾತರು ಆಗಿದ್ದುದರಿಂದ ಹಿಂದೂಗಳಲ್ಲಿ ಒಟ್ಟಾರೆ ಸಂಖ್ಯೆಯ ಪ್ರಜ್ಞೆ ಅಥವಾ ಕಾಳಜಿ ಕಡಿಮೆಯಾಗಿದೆ. ಜಾತಿವಾರು ವಿಂಗಡನೆ ಹೆಚ್ಚಾಗಿದೆ. ಪ್ರತೀ ಜಾತಿಗಳನ್ನು ಬೇರೆ ಬೇರೆ ಮತಗಳೆಂದು ಗಣಿಸಬೇಕಾದ ಪ್ರಸಂಗ ಬಂದಿದೆ. ಹಿಂದೂಗಳಲ್ಲಿ ನೂರು ಜಾತಿಗಳು ಇವೆಯೆಂದು ಇಟ್ಟುಕೊಳ್ಳೋಣ. ಹಿಂದುಗಳ ಒಟ್ಟಿಗೆ ಶೇಕಡಾವಾರು ಸಂಖ್ಯೆ 80. ಒಂದು ಜಾತಿಯ ಶೇಕಡಾವಾರು ಸಂಖ್ಯೆ ಬರೇ 0.8 ಆಗುತ್ತದೆ. ಜಾತಿಗಳನ್ನು ನೋಡಿ ವೋಟು ಹಾಕಿದರೆ ಒಟ್ಟಾರೆ ಹಿಂದುಗಳು ಸೋಲುವುದು ಖಂಡಿತ. ನಾವು ಜಾತಿಗಳನ್ನು ಲೆಕ್ಕಿಸದೆ ಹಿಂದೂ ಧರ್ಮಕ್ಕೇನೆ ವೋಟು ಹಾಕಿದರೆ ಮಾತ್ರ ಹಿಂದೂ ಧರ್ಮವು ಗೆಲ್ಲಬಹುದು.

ಹಿಂದೂ ಧರ್ಮವನ್ನು ಪಾಶ್ಚಾತ್ಯರು ತೆಗಳುವುದೇ ಹೆಚ್ಚಾಗಿದೆ. ವಿದೇಶಗಳಲ್ಲಿ ಉದ್ಯೋಗಕ್ಕೆಂದು ಹೋದ ಅನೇಕ ಹಿಂದುಗಳು ತಾನು ಹಿಂದೂ ಮತದವನು ಎಂದು ಹೇಳಿಸಿಕೊಳ್ಳಲು ಹಿಂಜರಿಯುತ್ತಾರೆ. ಹಿಂದೂ ಮತದ ಬಗ್ಗೆ ಅಪಾರ್ಥ ಮಾಡಿಕೊಂಡು ಈ ರೀತಿ ಆಗುತ್ತದೆ. ಆಧುನಿಕ ಶಿಕ್ಷಣ ಹೊಂದಿದ ಹಿಂದುಗಳು ಹಿಂದೂ ಧರ್ಮವನ್ನು ಇದ್ದಹಾಗೆ ತಿಳಿಯಲು ಅವರಿಗೆ ಅವಕಾಶವಿಲ್ಲ. ಈಗಿನ ನಮ್ಮ ಶಾಲೆಗಳಲ್ಲಿ ಹಿಂದೂ ಧರ್ಮದ ಪಾಠಗಳಿಲ್ಲ. ಈ ಧರ್ಮದ ಶಾಸ್ತ್ರಗಳಲ್ಲಿ ಪರೀಕ್ಷೆಗಳಿಲ್ಲ. ಇತರ ವಿಷಯಗಳನ್ನು ಅನೇಕ ವರ್ಷ ಶಾಲೆ ಕಾಲೇಜುಗಳಲ್ಲಿ ಕಲಿತು ಪರೀಕ್ಷೆಗಳನ್ನು ಪಾಸು ಮಾಡಿ ಡಿಗ್ರಿಗಳನ್ನು ಪಡೆದು ಉದ್ಯೋಗದಲ್ಲಿ ತೊಡಗಬಹುದು. ಆದರೆ ಹಿಂದೂ ಧರ್ಮವನ್ನು ಕಲಿತು ಈ ರೀತಿಯಲ್ಲಿ ಉದ್ಯೋಗ ಪಡೆಯಲು ಅವಕಾಶವಿಲ್ಲ. ಎಲ್ಲಾದರೂ ಇದ್ದರೆ ಅದು ಬಹಳ ಕಡಿಮೆ. ಹಿಂದುಗಳು ಶಾಲೆಗಳ ಹೊರಗೆ ಮತ್ತು ತಮ್ಮ ಮನೆಗಳಲ್ಲಿ ತಮ್ಮ ಧರ್ಮವನ್ನು ತಿಳಕೊಳ್ಳಬೇಕು. ಹಿಂದೂ ಧರ್ಮದ ಬಗ್ಗೆ ಆಸಕ್ತಿ ಇದ್ದವರು ಮಾತ್ರ ಅದರ ಬಗ್ಗೆ ಒಂದಿಷ್ಟು ಪುಸ್ತಕಗಳನ್ನು ಓದಿಯೋ ಅಥವಾ ಇತರರಿಂದ ಕೇಳಿಯೋ ತಿಳಕೊಳ್ಳುತ್ತಾರೆ. ಹಿಂದೂ ಧರ್ಮವನ್ನು ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಬಣ್ಣಿಸುತ್ತಾರೆ. ಈಗಿನ ಕಾಲದಲ್ಲಿ ಎಂದರೆ ಕ್ರಿ. ಶ. 2014ರಲ್ಲಿ ಸಾಮಾನ್ಯ ಹಿಂದೂ ಮನೆಗಳಲ್ಲಿ ಆಚರಿಸುವ ವಿವಿಧ ಧಾರ್ಮಿಕ ಆಚರಣೆಗಳೂ, ಧಾರ್ಮಿಕ ಚರ್ಚೆಗಳೂ ಮತ್ತು ದೇವಸ್ಥಾನಗಳಲ್ಲಿ ನಡೆಯುವ ಆರತಿ, ಪೂಜೆ, ಪ್ರಾರ್ಥನೆಗಳೂ ಒಂದೇ ರೀತಿ ಇಲ್ಲ. ವೈಯಕ್ತಿಕವಾಗಿ ಅವುಗಳು ಉಪಯೋಗಕರವಾಗಿದ್ದರೂ ಅವುಗಳನ್ನು ನಮ್ಮ ಆಧುನಿಕ ಜೀವನ ಶೈಲಿಗೆ ತಕ್ಕಂತೆ ಮಾರ್ಪಾಟು ಆಗ ಬೇಕಾದಷ್ಟು ಆಗಿಲ್ಲ. ಹಿಂದುಗಳಲ್ಲಿ ಇರುವ ವ್ಯತ್ಯಾಸಗಳು ಅನೇಕ. ನಾವು ಮಾತನಾಡುವ ಭಾಷೆಗಳು ಅನೇಕ ಇವೆ. ನಮ್ಮಲ್ಲಿ ಜಾತಿಭೇಧ ಇದೆ. ಅನೇಕ ದೇವರುಗಳಿವೆ. ವಿವಿಧ ದೇವರ ಮೂರ್ತಿಗಳಿವೆ. ಸಸ್ಯಾಹಾರಿಗಳು ಮತ್ತು ಮಾಂಸಾಹಾರಿಗಳೆಂದು ಬೇರೆ ಬಿರುಕು ಇದೆ. ಆತ್ಮ, ಪರಮಾತ್ಮ ಮತ್ತು ಪ್ರಕೃತಿ ಎಂದು ಬೇರೆ ಬೇರೆ ಸಿದ್ಧಾಂತಗಳಿವೆ. ಹಿಂದಿನ ಶಾಸ್ತ್ರಗಳು, ಈಗಿನ ಸ್ವಾಮಿಗಳು, ಧರ್ಮದ ಬಗ್ಗೆ ಬರೆಯುವವರು ಹಾಗೂ ಧರ್ಮವನ್ನು ಪಾಲಿಸುವವರು ಬೇರೆ ಬೇರೆ ವಿವರಗಳನ್ನು ಕೊಡುತ್ತಾರೆ. ಆಧುನಿಕ ಶಿಕ್ಷಣ ಪಡೆದು ವಿವಿಧ ಹಿಂದೂ ಧಾರ್ಮಿಕ ಪುಸ್ತಕಗಳನ್ನು ಓದಿದವರು ಈ ಮತವನ್ನು ತಮ್ಮದೇ ಆದ ರೀತಿಯಲ್ಲಿ ಆಚರಿಸುತ್ತಾರೆ. ಅವರ ವಿವರಣೆಗಳು ಇತರ ಸಾಮಾನ್ಯ ಹಿಂದುಗಳ ಆಚರಣೆಗೆ ಭಿನ್ನವಾಗಿವೆ.

ನಮ್ಮ ದೇಶದ ಸಂವಿಧಾನದಲ್ಲಿ ಸರಕಾರಕ್ಕೆ ಧರ್ಮನಿರ್ಪೇಕ್ಷತೆ ಕಡ್ಡಾಯ ಮಾಡಿ ಕೆಲವೇ ವರ್ಷಗಳಾಗಿವೆ. ಹೀಗೆ ಮಾಡಿದಂದಿನಿಂದ ಹಿಂದೂ ಧರ್ಮಕ್ಕೆ ಗಮನ ಕೊಡುವವರಿಲ್ಲವಾಗಿದೆ. ನಮ್ಮ ದೇಶದಲ್ಲಿ ಹಿಂದೂಗಳೇ ಬಹುಸಂಖ್ಯಾತರು. ಆದರೆ ಲೋಕಸಭೆಯ ಮತ್ತು ರಾಜ್ಯಗಳ ವಿಧಾನಸಭೆಗಳ ಚುನಾವಣೆಗಳಲ್ಲಿ ಧರ್ಮನಿರ್ಪೇಕ್ಷತೆಯನ್ನು ಸಾರುವ ಪಕ್ಷಗಳಿಗೇ ಹೆಚ್ಚು ಮತಗಳು ಬಿದ್ದುವು. ನಮ್ಮ ಸಂವಿಧಾನದಲ್ಲಿ ಯಾವ ಧಾರ್ಮಿಕ ಪಕ್ಷಗಳಿಗೂ ಚುನಾವಣೆಯಲ್ಲಿ ಪಾಲ್ಗೊಳ್ಳಲು ಅವಕಾಶವಿಲ್ಲ. ಯಾವ ರಾಜಕೀಯ ಪಕ್ಷವೂ ಕೂಡ ಧರ್ಮನಿರ್ಪೇಕ್ಷ ಪಕ್ಷವಾಗಿದ್ದರೆ ಮಾತ್ರ ಅದಕ್ಕೆ ಚುನಾವಣೆಯಲ್ಲಿ ಭಾಗವಹಿಸಲು ಮತ್ತು ಸರಕಾರ ರಚಿಸಲು ಸಂವಿಧಾನದಲ್ಲಿ ಎಡೆ ಇದೆ. ಚುನಾವಣೆಗಳಲ್ಲಿ ಜಯಗಳಿಸಿದ ಜನಪ್ರತಿನಿಧಿಗಳು ಪ್ರತಿನಿಧಿಸಭೆಗಳಲ್ಲಿ ಪಾಲ್ಗೊಳ್ಳಲು ಪ್ರತಿಜ್ಞೆ ಮಾಡುವಾಗ ತಾವು ಧರ್ಮನಿಪೇಕ್ಷರಾಗಿ ಕೆಲಸಮಾಡುತ್ತೇವೆ ಎನ್ನಬೇಕು. ಜಾತಿ ಮತಗಳ ಆಧಾರದ ಮೇಲೆ ಯಾವ ಪಕ್ಷವೂ ವೋಟುಗಳನ್ನು ಬೇಡಬಾರದು ಎಂಬ ನಿಯಮವಿದೆ. ಮತದಾರರಿಗೆ ಇಂತಿಂತಹ ಜಾತಿಯ ಅಥವಾ ಮತದ ಉಮೇದುವಾರರನ್ನು ಬೆಂಬಲಿಸಬೇಕು ಎಂಬ ಘೋಷಣೆಯನ್ನು ಅಧಿಕೃತ ಪಕ್ಷಗಳು ಮಾಡಬಾರದೆಂಬ ಕಾನೂನು ಇದೆ. ಇಡೀ ಚುನಾವಣೆ ಪ್ರಕ್ರಿಯೆಯೇ ಧರ್ಮನಿರ್ಪೇಕ್ಷತೆಯ ಮೇಲೆ ನಿಂತಿದೆ.
ಹೀಗೆ ಪ್ರತಿಯೊಂದು ಬಾಗಿಲೂ ಧರ್ಮದ ಪಕ್ಷಪಾತಿಗಳಿಗೆ ಮುಚ್ಚಿರುವಾಗ ಹೇಗೆ ತಾನೇ ರಾಜಕೀಯದಲ್ಲಿ ಒಂದು ಧರ್ಮದ ಪರವಾಗಿ ಸಕ್ರಿಯರಾಗಬಹುದು? ಭಾರತವು ಪ್ರಜಾಪ್ರಭುತ್ವ ಪಾಲಿಸುವ ದೇಶ. ನಮ್ಮ ಲೋಕಸಭೆಯಲ್ಲಿ ಮತ್ತು ರಾಜ್ಯಗಳ ವಿಧಾನಸಭೆಗಳಲ್ಲಿ ಹಿಂದೂ ವಿರೋಧಿ ಶಕ್ತಿಗಳ ಸಂಖ್ಯೆ ಹೆಚ್ಚು. ಹಿಂದೂ ರಾಜಕಾರಣಿಗಳಲ್ಲಿ ಒಗ್ಗಟ್ಟಿಲ್ಲ. ತಮ್ಮ ಮನೆಯಲ್ಲಿ ವಿಸ್ತಾರವಾಗಿ ಹಿಂದೂ ವಿಧಿಗಳಲ್ಲೇ ಪೂಜೆಗಳನ್ನು ನೆರವೇರಿಸುವ ರಾಜಕಾರಣಿಗಳು ತಮ್ಮ ರಾಜಕೀಯದಲ್ಲಿ ಮಾತ್ರ ಬಣ್ಣ ಬದಲಾಯಿಸಿಕೊಳ್ಳುತ್ತಾರೆ. ಸಂವಿಧಾನವು ಧರ್ಮನಿರ್ಪೇಕ್ಷ ಎಂದ ಮಾತ್ರಕ್ಕೆ ಧಾರ್ಮಿಕ ಒಗ್ಗಟ್ಟು ಆಗಬಾರದೆಂದೇನಿಲ್ಲ. ಎಲ್ಲಾ ಧರ್ಮದವರಿಗೆ ಅವರವರ ಧರ್ಮವನ್ನು ಆಚರಿಸಲು ಸಂವಿಧಾನವು ಅಡ್ಡಿಮಾಡಿಲ್ಲ.